ಬೆಳೆದ ಹುಡುಗಿ. ಕರುಳುಬಳ್ಳಿಯ ಸಂಬಂಧಕ್ಕಿಂತಲೂ ಹೆಚ್ಚಿನದು ತಮ್ಮಿಬ್ಬರಲ್ಲಿದೆ ಎಂದು ಅವನಿಗನಿಸುತ್ತಿತ್ತು. ದೇಶಾಂತರದಿಂದ ಮರಳಿ ಗ್ರಹಸ್ಥ ಜೀವನಕ್ಕೆ ಕಾಲಿರಿಸಿದ ರಾಮಪ್ಪನನ್ನು ಕಾಣಲು ಒಂದು ಸಂಜೆ ಕಚೇರಿ ಮುಗಿಸಿಕೊಂಡು ಮನೆಗೆ ಬಂದ ಲಕ್ಷ್ಮಣ ಸೀತೆಯ ಕಳೆಗುಂದಿದ ಮುಖವನ್ನೂ, ವಿಚಿತ್ರವಾಗಿ ಹೆಪ್ಪುಗಟ್ಟಿದ ಮೌನವನ್ನೂ ನೋಡುತ್ತ ಕುಳಿತ. ಅವಳ ದುಗುಡ, ಮುಂದೇನು ಎಂಬ ಪ್ರಶ್ನೆಗಳು. ದಿವಾನ್ ಮೇಲೆ ಕುಳಿತಿದ್ದ ರಾಮಪ್ಪ ವಿಲಕ್ಷಣವಾಗಿ ಕಾಣುತ್ತಿದ್ದ. ಉದ್ದ ಜಡೆ, ಗಲೀಜು ದಾಡಿ, ಹೂತುಹೋದಂತಿದ್ದ ಕಣ್ಣುಗಳು, ಕಪ್ಪು ಮುಖ, ಹಣೆಯ ಮೇಲೆ ಕೆಂಪು ಕುಂಕುಮದ ನಾಮ. ಕರುಳಿನಲ್ಲಿ ಮುಳ್ಳಾಡಿಸಿದಂತಾಯಿತು ಲಕ್ಷ್ಮಣನಿಗೆ. ಆ ಸಮಯದಲ್ಲೂ ಏನೂ ಆಗೇ ಇಲ್ಲವೆಂಬಂತೆ ಸಮಚಿತ್ತದಿಂದ ಚುರುಕಿನಲ್ಲಿ ಓಡಾಡಿಕೊಂಡಿದ್ದ ಸೀತೆಗೆ ಮೆಲ್ಲನೇ ಬಾ ಹೊರಗಡೆ ಹಾಗೆ ಹಣ್ಣು ತಗೊಂಡು ಬರೋಣವೆಂದ. ಯಾಕೋ ಎಲ್ಲಾದರೂ ಅವಳ ಪಕ್ಕ ಕೂತು ಅವಳನ್ನು ಸಮಾಧಾನಿಸಬೇಕೆಂದು ಅವನ ಮನಸ್ಸು ತುಡಿಯುತ್ತಿತ್ತು. ನಿನ್ನೆ ತಾನು ಕಳಿಸಿದ ಜೋಕ್ ಓದಿಕೊಂಡು ನಗುತ್ತಿದ್ದ ಸೀತೆ ಇವಳೇನಾ? ನಂಬಲಾಗುತ್ತಿಲ್ಲ.

'ಬೇಡಾ ಕಣೋ ಸಂಜೆಯಾಗಿದೆ, ಅವರೀಗ ಧ್ಯಾನ ಮಾಡೋ ಸಮಯ.'

'ನಿಂಗೆ ಟೀ ಮಾಡ್ಲಾ?' ಎಂದವಳನ್ನು ತಡೆದ. 'ಬೇಡಾ ಬಿಡು ಹಾಗಿದ್ರೆ' ಎಂದು ಅವಳು ಹಾಗೇ ಕೆಲಹೊತ್ತು ಕೂತಳು. ಇಬ್ಬರಿಗೂ ಮಾತಾಡಲು ತೋರದೇ, ಮಾಡಲಿಕ್ಕೂ ಏನಿರದೇ ಮುಖ ಮುಖ ನೋಡುತ್ತ ಕುಳಿತರು. ಮೌನವೇ ಮಾತಾಡುತ್ತಿತ್ತು. ಕತ್ತಲು ಕೇಳುತ್ತಿತ್ತು. ತುಂಬಾ ಹೊತ್ತಿನ ನಂತರ ರಾಮಪ್ಪ ಮನಸ್ಸಿಗೆ ಬಂದಂತೆ ಏನನ್ನೋ ಹರಟಿದ. ಅವನ ಬಗ್ಗೆ ಇವನಿಗೆ ತಿಳಿಯುವ ಕುತೂಹಲವಿಲ್ಲ. ಅವನಿಗೆ ಇವನ ಇರುವಿಕೆಯೇ ಸಹ್ಯವಾಗುತ್ತಿಲ್ಲ, ಯಾರೋ ಶತ್ರುವಿನೊಂದಿಗೆ ಮುಖಾಮುಖಿಯಾದಂತೆ ಹಗೆತನದ ಹೊಗೆಯಲ್ಲ ಸುತ್ತಿಕೊಳ್ಳುತ್ತಿರುವಂತೆ ರಾಮಪ್ಪ ಉಕ್ಕುತ್ತಿದ್ದ ಕ್ರೋಧವನ್ನು ಅದುಮಿಡುತ್ತಿದ್ದ. ಬೆಂಕಿಯಲ್ಲಿ ಬಿದ್ದಂತೆ ಚಡಪಡಿಸುತ್ತಿದ್ದ. ಇನ್ನು ಮುಂದಿನ ಬಿರುಗಾಳಿಯ ಸೂಚನೆಯನ್ನು ಅರಿತವಳಂತೆ ಸೀತೆ ಹೊತ್ತಾಯಿತು, ಕತ್ತಲಾಗುವ ಮೊದಲು ಹೋಗು ಎಂದು ಲಕ್ಷ್ಮಣನನ್ನು ಕಳಿಸಿಕೊಟ್ಟಿದ್ದಳು. ಯಾರಾದರೂ ಬಂದು ತನ್ನ ಅಂತರಂಗವೆಲ್ಲ ಕಲಕುವ ಬದಲು ಒಬ್ಬಂಟಿಯಾಗಿರುವುದೇ ಸರಿಯೆಂದು ತೋರುತ್ತಿತ್ತು. ಈಗ ರಾಮಪ್ಪನೂ ಬೇಡ, ಅವನ ಸಮಾಧಿಯೂ, ಧ್ಯಾನವೂ, ಏನೂ ಬೇಡ ಎನಿಸಿಬಿಟ್ಟಿತ್ತು ಸೀತೆಗೆ.

ಮನೆಯೆಲ್ಲ ಒಂಥರಾ ಗಲೀಜುಗಟ್ಟಿದಂತೆ ಉಸಿರುಗಟ್ಟುತ್ತಿತ್ತು. ಅವನಿಲ್ಲದಾಗಲೇ ಎಲ್ಲ ಚೆನ್ನಾಗಿತ್ತು! ತನ್ನ ಒಂಟಿತನವೂ ಚೆನ್ನಾಗಿತ್ತು ಅನಿಸುತ್ತದೆ. ಮರುದಿನ ಯಾವುದೋ ಕೆಲಸವೆಂದು ಲಕ್ಷ್ಮಣನಿಗೆ ಬೇರೆ ಊರಿಗೆ ಹೋಗಬೇಕಾಗಿ ಬಂದು, ಏರ್ ಪೋರ್ಟಿಂದಲೇ ಸೀತೆಗೆ ತಿಳಿಸಿದ್ದ. ಆದರೆ ಊರನ್ನು ತಲುಪುತ್ತಲೇ ಮತ್ತೆ ಫೋನಾಯಿಸಿ 'ಸಾರಿ ಸೀತಾ, ನಿಂಗೆ ಏನಾದರೂ ದುಡ್ಡುಗಿಡ್ಡು ಬೇಕಾ ಅಂತಾ ಕೇಳೋದಕ್ಕೂ ಮರ್ತುಹೋಯ್ತು ಕಣೆ. ಬೇಕಾಗಿದ್ದರೆ ನಿನ್ನ ಬ್ಯಾಂಕ್ ಡಿಟೇಲ್ ಎಸ್ಸೆಮ್ಮೆಸ್ ಮಾಡು' ಎಂದು ತಪ್ಪುಮಾಡಿದವನಂತೆ ತಾನೇ ಒದ್ದಾಡಿದ. 'ನಿನ್ನವರು ಚೆನ್ನಾಗಿದ್ದಾರಲ್ಲವಾ?' ತನ್ನ ಮನಸ್ಸಿನ ಸಮಾಧಾನಕ್ಕಾಗಿ ತಡೆತಡೆದು ಪ್ರಶ್ನಿಸಿದ್ದ.

'ನೀ ಇಷ್ಟದಾರೂ ಕೇಳಿದೆಯಲ್ಲ, ಅದೇ ಸಾಕು. ಮತ್ಯಾರಿದ್ದಾರೆ ಈ ರೀತಿ ಕೇಳೋರು ನಂಗೆ?' ಸೀತೆ ಗದ್ಗದಳಾಗಿ ಉತ್ತರಿಸಿದ್ದಳು.